ಈ) ಕೋಲಾರ ಜಿಲ್ಲೆಯ ೮ ಮಾರ್ಕೆಟ್ಟುಗಳ ಪೈಕಿ, ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ರೇಷ್ಮೆ ಕೃಷಿ ಯೋಜನೆಯಡಿಯಲ್ಲಿ ಕೋಲಾರ ಹೆಚ್. ಕ್ರಾಸ್ ಚಿಕ್ಕಬಳ್ಳಾಪುರಗಳಲ್ಲಿ ಕಟ್ಟಡಗಳು ಕಟ್ಟಲಾಗಿದ್ದು ಶಿಡ್ಲಘಟ್ಟದಲ್ಲಿ ಕಟ್ಟಡದ ಕೆಲಸವು ಅಂತಿಮ ಘಟ್ಟದಲ್ಲಿದೆ ಮತ್ತು ಬೆಂಗಳೂರು ಜಿಲ್ಲೆಯ ೧೧ ಮಾರ್ಕೆಟ್ ಗಳ ಪೈಕಿ ಕನಕಪುರ, ವಿಜಯಪುರ, ರಾಮನಗರ ಮತ್ತು ಚನ್ನಪಟ್ಟಣದಲ್ಲಿ ಮಾರುಕಟ್ಟೆಗಳಿಗೆ ಇದೇ ಯೋಜನೆಯಲ್ಲಿ ಕಟ್ಟಡಗಳನ್ನು ಒದಗಿಸಲಾಗಿದೆ. ಇದೇ ನೆರವಿನ ಮಧ್ಯಕಾಲೀನ ಪರಿಯಲ್ಲಿ ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಾಗಡಿ ಮತ್ತು ಕುದೂರು ಹಾಗೂ ಆನೇಕಲ್ ತಾಲ್ಲೂಕಿನ ಸರ್ಜಾಪುರ ಮತ್ತು ಅತ್ತಿಬೆಲೆಗಳಲ್ಲಿ ಮಾರುಕಟ್ಟೆಗಳಿಗೆ ಸರ್ಕಾರಿ ಕಟ್ಟಡಗಳನ್ನು ಕಟ್ಟಿಸುವ ಯೋಜನೆಯಿದೆ. ಇವುಗಳ ಹೊರತಾಗಿ ಈ ಜಿಲ್ಲೆಗಳ ಬೇರೆ ಸ್ಥಳಗಳಲ್ಲಿ ಗೂಡಿನ ಮಾರುಕಟ್ಟೆಗಳಿಗೆ ಕಟ್ಟಡಗಳನ್ನು ಒದಗಿಸುವ ಯೋಜನೆ ಪರ್ಯದಲ್ಲಿ ಯಾವುದೂ ಇಲ್ಲ.

## ತರೀಕೆರೆ ತಾಲ್ಲೂಕಿನಲ್ಲಿ ರೇಷ್ಮೆ ಅಭಿವೃದ್ಧಿ ಕುರಿತು

೧೪೬. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಪಾನ್ಯ ರೇಷ್ಮೆ ಖಾತೆಯ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನಲ್ಲಿ ಕೈಗೊಂಡ ರೇಷ್ಮೆ ಅಭಿವೃದ್ಧಿ ಕಾರ್ಯಕ್ರಮಗಳೇನು ;

ಆ) ಆ ಪೈಕಿ ಎಷ್ಟು ಚಾಕಿ ಆಥವಾ ಇತರೆ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ ;

ಇ) ಈ ತಾಲ್ಲೂಕಿನಲ್ಲಿ ಈ ಬಗ್ಗೆ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ವೈ. ಕೆ. ರಾಮಯ್ಯ (ರೇಷ್ಮೆ ಖಾತೆಯ ರಾಜ್ಯ ಸಚಿವರು).—

ಅ) ತರೀಕೆರೆ ತಾಲ್ಲೂಕಿನಲ್ಲಿ ರೇಷ್ಮೆ ಕೃಷಿ ಕ್ಷೇತ್ರ, ಚಾಕಿ ಸಾಗಾಣಿಕೆ ಕೇಂದ್ರಗಳು ವಲಯಾಧಿಕಾರಿಗಳ ಕಛೇರಿಗಳನ್ನು ಸ್ಥಾಪಿಸಲಾಗಿದೆ ಮಂತ್ತು ಡಚ್ ನೆರವಿನ ಯೋಜನೆಯಲ್ಲಿ ಹುಳು ಸಾಕುವ ಮನೆ, ವಾಸ ಮತ್ತು ಹುಳು ಸಾಕುವ ಮನೆ, ರೇಷ್ಮೆ ನೂಲು ಬಿಚ್ಚುವ ಪೆಡ್ಡು, ವಾಸ ಮತ್ತು ರೇಷ್ಮೆ ನೂಲು ಬಿಚ್ಚುವ ಪೆಡ್ಡುಗಳನ್ನು ಕಟ್ಟಲು ಸಾಲವನ್ನು ಒದಗಿಸಲಾಗಿದೆ. ಇದೂ ಅಲ್ಲದೆ ಡಚ್ ನೆರವಿನಿಂದ ಒಂದು ಚಾಕಿ ಸಾಕಾಣಿಕೆ ಕೇಂದ್ರದ ಕಟ್ಟಡವನ್ನೂ ಕಟ್ಟಿಸಲಾಗಿದೆ.

ಆ) ವಿವರಗಳು ಹೀಗಿವೆ :

| | |
|---|---|
| ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ | ೧ ಸೊಲ್ಲಾಪುರ |
| ಚಾಕಿ ಸಾಗಾಣಿಕೆ ಕೇಂದ್ರ—೪ | ೧ ಪೊಳಲಿನ ಚನ್ನಹಳ್ಳಿ |
| | ೨ ರಂಗೇನಹಳ್ಳಿ |
| | ೩ ಗೋಪಾಲಭೂಸೇನಹಳ್ಳಿ |
| | ೪ ಲಿಂಗದಹಳ್ಳಿ |

ತರಬೇತಿಯನ್ನು ಸೊಲ್ಲಾಪುರದ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ಒದಗಿಸಲಾಗಂತ್ತಿದೆ.

ಇ) ವಿವರಗಳು ಹೀಗಿವೆ : (೧೯೮೫–೮೬ನೇ ಸಾಲಿನ ಡಿಸೆಂಬರ್ ಅಂತ್ಯದವರೆಗೆ)

| | |
|---|---|
| ೧ ಚಾಕಿ ಸಾಕಾಣಿಕೆ ಕೇಂದ್ರಗಳು | ೩೦,೦೮೭–೦೦ |
| ೨ ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ | ೧,೪೯,೧೬೫–೦೦ |
| ೩ ರೇಷ್ಮೆ ಪಲಯಗಳು | ೧೫,೦೭೦–೦೦ |
| ೪ ವಿಶೇಷ ಘಟಕ ಯೋಜನೆ (ಸ್ಪೆಷಲ್ ಕಾಂಪೋನೆಂಟ್ ಪ್ಲಾನ್) | ೬೮,೧೬೮–೦೦ |
| | ೨,೬೨,೪೬೦–೦೦ |

ಡಚ್ ನೆರವಿನಲ್ಲಿ ಒದಗಿಸಿದ ಸಾಲ ಸೌಲಭ್ಯಗಳು

| | | ಫಲಾನುಭವಿಗಳು | ರೂಪಾಯಿಗಳಲ್ಲಿ |
|---|---|---|---|
| ೧ | ವಾಸ ಮತ್ತು ರೀಲಿಂಗ್ ಷಡ್ (ಮಾದರಿ ಎ) | ೧ | ೪೭,೮೦೦–೦೦ |
| ೨ | ವಾಸ ಮತ್ತು ರೀಲಿಂಗ್ ಷಡ್ (ಮಾದರಿ ಬಿ) | ೧ | ೪೨,೩೫೦–೦೦ |
| ೩ | ರೀಲಿಂಗ್‌ಷಡ್ | ೧ | ೨೪,೫೦೦–೦೦ |
| ೪ | ವಾಸ ಮತ್ತು ಹುಳು ಸಾಕುವ ಮನೆ | ೪ | ೭೬,೮೦೦–೦೦ |
| ೫ | ಹುಳು ಸಾಕುವ ಮನೆ | ೬ | ೯೭,೨೦೦–೦೦ |
| | ಒಟ್ಟು | ೧೩ | ೨,೮೮,೬೫೦–೦೦ |

ಇಲಾಖೆಯ ಚಾಕಿ ಸಾಕಾಣಿಕೆ ಕೇಂದ್ರ ಹೆಚ್. ರಂಗಾಪುರ ರೂ. ೫೩,೦೦೪–೦೦

## ಹೊಸದುರ್ಗ ತಾಲ್ಲೂಕು ಮುತ್ತೋಡು ಹೋಬಳಿಯಲ್ಲಿ ಸಿಮೆಂಟ್ ಕಾರ್ಖಾನೆ ಆರಂಭವಾಗುವ ಬಗ್ಗೆ

೧೫೨. ಶ್ರೀ ಜಿ. ರಾಮದಾಸ್.—ಮಾನ್ಯ ಭಾರಿ ಪರಿಸರ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸದುರ್ಗ ತಾಲ್ಲೂಕು ಮುತ್ತೋಡು ಹೋಬಳಿಯಲ್ಲಿ ಆರಂಭವಾಗಲಿರುವ ಸಿಮೆಂಟ್ ಕಾರ್ಖಾನೆಯಿಂದ ತೆಂಗಿನ ಬೆಳೆ ಹಾಗೂ ರೈತರಿಗೆ ಹಾನಿಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕಾನೂನು ಬಾಹಿರವಾಗಿ ಅಪಾರ ತೆಂಗಿನ ವನದ ಮಧ್ಯೆ ಧೂಳುಕಾರುವ ಸಿಮೆಂಟ್ ಕಾರ್ಖಾನೆಯ ಆರಂಭಕ್ಕೆ ಸರ್ಕಾರದವರು ಅನುಮತಿ ನೀಡಿರುವುದು ಸರಿಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ರೈತರಿಗೆ ಹಾನಿಯಾಗದಂತೆ ಸರ್ಕಾರದವರು ಯಾವ ಕ್ರಮವನ್ನು ಕೈಗೊಳ್ಳುವರು ?

ಶ್ರೀ ಜೆ. ಹೆಚ್. ಪಟೇಲ್ (ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ಈ ಪ್ರದೇಶದಲ್ಲಿ ಕಾರ್ಖಾನೆಗಳು ಚಿಕ್ಕ ಪ್ರಮಾಣದಾಗಿದ್ದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರವಾನಿಗೆ ಪಡೆದಿವೆ. ಮತ್ತು ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರು ಸೂಚಿಸಿರುವ ಕ್ರಮಗಳನ್ನು ಕೈಗೊಂಡಿದ್ದಾರೆ.

ಆ) ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರ ಮನ್ನಣೆ ಪಡೆದ ನಂತರವೇ ಕೈಗಾರಿಕೆಗಳಿಗೆ ಅನುಮತಿ ನೀಡಿದೆ.

ಇ) ಸ್ಥಳೀಯ ಗಣ್ಯ ನಾಗರೀಕರು ಮತ್ತು ಉದ್ದಿಮೆದಾರರ ನಡುವೆ ಆಗಿರುವ ಒಪ್ಪಂದದ ಪ್ರಕಾರ ಉದ್ದಿಮೆದಾರರು ಸ್ಥಳೀಯ ಪಂಚಾಯಿತಿಗೆ ಪ್ರತಿ ವರ್ಷವೂ ಪರಿಹಾರ ಧನವನ್ನು ನೀಡುವುದೂ ಅಲ್ಲದೆ ತೆಂಗಿನ ಬೆಳೆಗೆ ಹಾನಿಯಾದ ಪಕ್ಷದಲ್ಲಿ ಒಪ್ಪಂದದ ಪ್ರಕಾರ ಪರಿಹಾರವಾಗಿ ಧನವನ್ನು ನೀಡುತ್ತದೆ.

## ನಂದಿ ಹೆಸ್ಸಿ ಟೆಕ್ಸ್‌ಟೈಲ್ಸ್ ಬಗ್ಗೆ

೬. ಶ್ರೀ ಕೆ. ಹೆಚ್. ಪಾಟೀಲ್ (ಗದಗ).— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.–

ಅ) ನಂದಿ ಮತ್ತು ಹೆಸ್ಸಿ ಟೆಕ್ಸ್‌ಟೈಲ್ ಮಿಲ್ಸ್ ಲಿ. ನರಗುಂದಕ್ಕೆ ಸಂಬಂಧಿಸಿದಂತೆ ಸರ್ಕಾರದವರು ಇಂಡಸ್ಟ್ರಿಯಲ್ ಅಂಡರ್‌ಟೇಕಿಂಗ್ ಕಾನೂನಿನ ೪(೨)ನೇ ವಿಧಿಯ ಅನ್ವಯ ಒಂದು ಪ್ರಕಟನೆ ಹೊರಡಿಸಿರುವುದು ನಿಜವೆ ?